ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಾಗರ.

ಸಿ.ಸಿ.ನಂಃ **413/2024**

ಫಿರ್ಯಾದಿ ಃ ವೈಶಾಕ್ ಆರ್ ಬಿನ್ ರವೀಂದ್ರ

ವಿರುದ್ಧ

ಆರೋಪಿ ಃ ಶಿವಾನಂದ. ಡಿ ಬಿನ್ ದುರ್ಗಪ್ಪ

ಮಾದೇಶ ಎಂ.ವಿ., ಬಿ.ಕಾಂ.,ಎಲ್.ಎಲ್.ಬಿ., ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಆದ ನಾನು

ಶಿವಾನಂದ. ಡಿ<br>
ಬಿನ್ ದುರ್ಗಪ್ಪ<br>
ವಯಸ್ಸು 55 ವರ್ಷ,<br>
ವಾಸಃ ರಂಗನಾಥ ಬೀದಿ, ಆನಂದಪುರ ಹೋಬಳಿ, ಸಾಗರ<br>
. ತಾಲ್ಲೂಕು, ಶಿವಮೊಗ್ಗ ಜಿಲ್ಲೆ

**<u>ನಿಮ್ಮ ಮೇಲೆ ಕೆಳಕಂಡಂತೆ ಆಪಾದನೆ ಮಾಡುವುದೇನೆಂದರೆ</u>**

ಆರೋಪಿಯಾದ ನೀವು ಮತ್ತು ಪಿರ್ಯಾದುದಾರರು ಪರಸ್ಪರ ಪರಿಚಯಸ್ಥರಾಗಿದ್ದು, ನೀವು ನಿಮ್ಮ ಗೃಹ ಕೃತ್ಯದ ಅಡಚಣೆಯನ್ನು ನಿವಾರಿಸುವ ಸಲುವಾಗಿ ಪಿರ್ಯಾದಿಯ ಬಳಿ ದಿನಾಂಕಃ **26-10-2023** ರಂದು ರೂ. **90,000/-** ಗಳನ್ನು ಕೈಗಡ ಸಾಲವಾಗಿ ಪಡೆದುಕೊಂಡಿರುತ್ತೀರಿ. ಸದರಿ ಹಣವನ್ನು **1** ವಾರದ ನಂತರ ಮರುಪಾವತಿ ಮಾಡುವುದಾಗಿ ತಿಳಿಸಿರುತ್ತೀರಿ. ನಂತರ, ಸದರಿ ಹಣವನ್ನು **3** ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಹೇಳಿರುತ್ತೀರಿ. ಆದರೆ, ಸಕಾಲದಲ್ಲಿ ಹಣವನ್ನು ಮರುಪಾವತಿ ಮಾಡದೇ ಇರುವುದರಿಂದ ಪಿರ್ಯಾದುದಾರರು ಸದರಿ ಹಣವನ್ನು ಹಲವಾರು ಭಾರಿ ನಿಮ್ಮ ಬಳಿ ಕೇಳಿದಾಗ ದಿನಾಂಕಃ **12-02-2024** ರಂದು ನೀವು ಖಾತೆ ಹೊಂದಿರುವ ಐ.ಡಿ.ಎಫ್.ಸಿ ಫಸ್ಟ್ ಬ್ಯಾಂಕ್ ಸಾಗರ ಶಾಖೆಯ ಚೆಕ್ ನಂಃ **000005** ರ ರೂ.**90,000/-** ಗಳನ್ನು ನಮೂದಿಸಿ ಪಿರ್ಯಾದುದಾರರಿಗೆ ನೀಡಿರುತ್ತೀರಿ. ಪಿರ್ಯಾದುದಾರರು ತಮ್ಮ ಬ್ಯಾಂಕ್ ಖಾತೆ ಹೊಂದಿರುವ ಐ.ಡಿ.ಎಫ್.ಸಿ. ಫಸ್ಟ್ ಬ್ಯಾಂಕ್ ಸಾಗರ ಶಾಖೆಯ ಮುಖಾಂತರ ದಿನಾಂಕಃ **12-02-2024** ರಂದು ಸಲ್ಲಿಸಿದಾಗ ಅಕೌಂಟ್ ಕ್ಲೋಸ್ಡ್ ಎಂಬ ಹಿಂಬರಹದೊಂದಿಗೆ ವಾಪಾಸ್ಸು ಬಂದಿರುತ್ತದೆ. ಆ ಬಗ್ಗೆ ಫಿರ್ಯಾದಿ ತಮ್ಮ ವಕೀಲರ ಮುಖಾಂತರ ನಿಮಗೆ ದಿನಾಂಕ **15-02-2024** ರಂದು ಕಾನೂನುಬದ್ಧ ತಿಳುವಳಿಕೆ ಪತ್ರವನ್ನು ನೊಂದಾಯಿತ ಅಂಚೆ ಮೂಲಕ ಕಳುಹಿಸಿದ್ದು, ಸದರಿ ನೋಟಿಸ್ಸು ಆರೋಪಿಯಾದ ನಿಮಗೆ ದಿನಾಂಕಃ **16-02-2024** ರಂದು ಜಾರಿಯಾಗದೇ ಪಾರ್ಟಿ ತೆಪ್ಪ್ ಎಂದು ಮರಳಿ ಬಂದಿದ್ದು, ಆದಾಗ್ಯೂ ಸಹ, ನೀವು ಪಿರ್ಯಾದಿಗೆ ಮೋಸ ಮತ್ತು ನಷ್ಟ ಮಾಡುವ ಉದ್ದೇಶದಿಂದ ಚೆಕ್ಕನ್ನು ಕೊಟ್ಟು ನೀವು ವರ್ಗಾವಣೆ ಲಿಖಿತಗಳ ಅಧಿನಿಯಮ ಕಲಂ. **138** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ. ಇದು ನನ್ನ ಸಂಜ್ಞೆಗೆ ಒಳಪಟ್ಟಿರುತ್ತದೆ.

ಈ ಆಪಾದನೆಯನ್ನು ನಿಮ್ಮ ಮೇಲೆ ಮಾಡಲು ನಾನು ಬದ್ಧನಾಗಿರುತ್ತೇನೆ.

**1)** ಈಗ ನಾನು ಓದಿ ಹೇಳಿದ ಆರೋಪಣೆ ನಿಮಗೆ ಅರ್ಥವಾಗಿದೆಯೇ**?**

ಉತ್ತರಃ

**2)** ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ಇಲ್ಲವೋ **?**

ಉತ್ತರಃ

ದಿನಾಂಕಃ

(ಮಾದೇಶ ಎಂ.ವಿ.,)
ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ಸಾಗರ